**ದಿನಾಂಕ: 01.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಆರ್ ವಕೀಲರಿಂದಃ-**

ನಾನು ಹೊಗರೆಹಳ್ಳಿಯಲ್ಲಿ ವಾಸವಾಗಿರುತ್ತೇನೆ. ಸಿವಿಲ್ ದಾವೆಯಲ್ಲಿ ನನ್ನ ಸಾಕ್ಷಿ ವಿಚಾರಣೆಯಾಗಿರುತ್ತದೆ. ಸದರಿ ಸಿವಿಲ್ ದಾವೆಯಲ್ಲಿ ನಾನು ಹೇಳಿದ ವಿಚಾರಗಳು ನನಗೆ ಗೊತ್ತು. ಸಿವಿಲ್ ದಾವೆಯಲ್ಲಿ ಸುಮಾರು 7-8 ವರ್ಷಗಳಿಂದ ಕಡೂರಿನಲ್ಲಿ ವಾಸವಾಗಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ, ಸಾಕ್ಷಿಯು ನಮ್ಮ ಜಮೀನು ಹೊಗರೆಹಳ್ಳಿಯಲ್ಲಿದ್ದು ಎರಡೂ ಕಡೆ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ಅದೇ ರೀತಿ ಸರ್ವೆ ನಂ 173ಃ1 ರ ಜಮೀನನ್ನು 1 ನೇ ಆರೋಪಿಗೆ ಗುತ್ತಿಗೆಗೆ ನೀಡಿರುತ್ತೇವೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಗುತ್ತಿಗೆಯನ್ನು ನೀಡಿರುವ ದಿನಾಂಕದಿಂದ ಸರ್ವೆ ನಂ 173ಃ1 ರ ಜಮೀನನ್ನು 1 ನೇ ಆರೋಪಿ ಉಳುಮೆ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು ನಾವೇ ಸ್ವಾದೀನ ಹೊಂದಿರುತ್ತೇವೆ ಎಂದು ನುಡಿಯುತ್ತಾರೆ. ಗುತ್ತಿಗೆಯನ್ನು 2015-16 ನೇ ಸಾಲಿನಲ್ಲಿ ಮುಕ್ತಾಯಗೊಳಿಸಿರುತ್ತೇವೆ. ಗುತ್ತಿಗೆಯನ್ನು ಕೊನೆಗೊಳಿಸಿರುವ ಯಾವುದೇ ದಾಖಲೆ ಇಲ್ಲಾ ಎಂದರೆ ಸಾಕ್ಷಿ ಬಾಯಿ ಮಾತಿನ ಮೂಲಕ ಮುಕ್ತಾಯಗೊಳಿಸಿರುತ್ತೇವೆ ಎಂದು ನುಡಿಯುತ್ತಾರೆ. 1 ರಿಂದ 6 ನೇ ಆರೋಪಿತರು ಒಂದೇ ಮನೆಯವರು ಎಂದರೆ ಸರಿ. 2011 ರಲ್ಲಿ 1 ನೇ ಆರೋಪಿಗೆ ಜಮೀನನ್ನು ಗುತ್ತಿಗೆಗೆ ನೀಡಿರುತ್ತೇವೆ.

1 ನೇ ಆರೋಪಿಯು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ವಿರುದ್ದ ನಾವು ಆರೋಪಿತರಿಗೆ ಸರ್ವೆ ನಂ 173ಃ1 ರ ಜಮೀನನ್ನು ಮಾರಾಟ ಮಾಡುವುದಾಗಿ ಮುಂಗಡ ಹಣ ಪಡೆದು ಜಮೀನಿನ ಸ್ವಾದೀನವನ್ನು ಬಿಟ್ಟುಕೊಟ್ಟಿದ್ದರೂ ಸಹ ಕ್ರಯಪತ್ರವನ್ನು ನೋಂದಣಿ ಮಾಡದೇ ಇರುವ

ವಿರುದ್ಧ ಕರಾರಿನ ನಿರ್ದಿಷ್ಟ ಪರಿಪಾಲನೆ ಪರಿಹಾರ ಕೋರಿ ಅಸಲು ದಾವಾ ಸಂಖ್ಯೆ 276:2021 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. 2011 ರಿಂದ 1 ನೇ ಆರೋಪಿಯೇ ಸರ್ವೆ ನಂ 173:1 ರ ಜಮೀನನ್ನು ಸ್ವಾದೀನ ಹೊಂದಿರುವ ಕಾರಣ ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ಉಳುಮೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ದೂರನ್ನು ನಾನೇ ಪೋಲಿಸ್ ಠಾಣೆಯಲ್ಲಿ ಬರೆದಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅಶೋಕ್ ರವರು ದೂರವಾಣಿ ಮೂಲಕ ನಮ್ಮ ಜಮೀನನ್ನು ಆರೋಪಿತರು ಉಳುಮೆ ಮಾಡುತ್ತಿರುವ ವಿಚಾರ ನನಗೆ ತಿಳಿಸಿರುವುದನ್ನು ನಾನು ನಿಪಿ-1 ರ ದೂರಿನಲ್ಲಿ ಹೇಳಿರುವುದಿಲ್ಲ. ಕಡೂರಿನಿಂದ ಸರ್ವೆ ನಂ 173:1 ರ ಜಮೀನಿಗೆ ಸುಮಾರು 23-25 ಕಿಮಿ ದೂರವಿರುತ್ತದೆ. ಘಟನೆಯ ದಿನ ನಾನು, ಚಾಸಾ-2 ಮತ್ತು 3 ರವರು ಒಂದೇ ಸ್ಕೂಟಿಯಲ್ಲಿ ಹೋಗಿರುತ್ತೇವೆ. ನಮಗೆ ಆರೋಪಿತರು ಉಳುಮೆ ಮಾಡುತ್ತಿರುವ ಬಗ್ಗೆ ಪಕ್ಕದ ಜಮೀನವರು ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನನಗೆ ಮಾಹಿತಿ ತಿಳಿಸಿದ ವ್ಯಕ್ತಿ ಯಾರು ಎಂಬ ಪ್ರಶ್ನೆಗೆ ಸಾಕ್ಷಿಯು ಆತನ ಹೆಸರನ್ನು ಬಹಿರಂಗಪಡಿಸಬೇಡಿ ಎಂದು ಸದರಿ ವ್ಯಕ್ತಿ ನನಗೆ ತಿಳಿಸಿರುತ್ತಾರೆ. ಈ ವಿಚಾರವನ್ನು ಇದೇ ದಿನ ನ್ಯಾಯಾಲಯದಲ್ಲಿ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಸರ್ವೆ ನಂ 173:1 ರ ಜಮೀನಿಗೆ ಹೋದಾಗ ಆ ಸಮಯದಲ್ಲಿ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರು ಇದ್ದರು. ಅವರು ಟ್ರಾಕ್ಟರ್ ನಲ್ಲಿ ಉಳುಮೆ ಮಾಡಿರುತ್ತಾರೆ. ನಾವು ಹೋದಾಗ ಅಲ್ಲಿ ಟ್ರಾಕ್ಟರ್ ಇರಲಿಲ್ಲ. ನಿಪಿ-5 ಮತ್ತು 6 ರ ಛಾಯಾಚಿತ್ರಗಳಲ್ಲಿ ಉಳುಮೆ ಮಾಡಿರುವ ಯಾವುದೇ ಕುರುವುಗಳು ಕಂಡುಬರುವುದಿಲ್ಲ ಎಂದರೆ ಸರಿ. ಗಲಾಟೆಯು ಸುಮಾರು 45 ನಿಮಿಷಗಳ ತನಕ ನಡೆದಿರುತ್ತದೆ. ಗಲಾಟೆ ಸಮಯದಲ್ಲಿ ಯಾರು ಯಾರು ಬಂದಿರುತ್ತಾರೆ ಎಂದು ನನಗೆ ಸರಿಯಾಗಿ ನೆನಪಿಲ್ಲ. ಸಾಕ್ಷಿ ಮುಂದುವರೆದು ಚಾಸಾ-3 ರವರು ಜೋರಾಗಿ ಕಿರುಚಿದ ನಂತರ ಜಮೀನಿನ ಪಕ್ಕದಲ್ಲಿದ್ದ ಕೋಳಿ ಫಾರಂ ನಲ್ಲಿದ್ದ ವ್ಯಕ್ತಿಗಳು ಬಂದರು. ಅವರುಗಳು ಯಾರು ಎಂದು ನನಗೆ ಈಗ ಹೇಳಲಾಗುವುದಿಲ್ಲ. ನ್ಯಾಯಾಲಯದ ಮುಂದಿರುವ ಮುಮಾಗಳ ಪೈಕಿ ಮರದ ಹಿಡಿ ಇರುವ ಯಾವುದೇ ಕತ್ತಿ ಇರುವುದಿಲ್ಲ. ಸರ್ವೆ ನಂ 173:1 ರ ಜಮೀನು ಖಾಲಿ ಜಮೀನು ಎಂದರೆ ಸರಿ. ನಾವು ರೈತರು ಎಂದರೆ ಸರಿ. ಮುಮಾ-4 ನ್ನು ಅಡಿಕೆ ಮತ್ತು ತೆಂಗು ಫಸಲನ್ನು ಕೊಯ್ಯಲು ಉಪಯೋಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮುಮಾಗಳು ತುಕ್ಕು ಹಿಡಿದಿರುತ್ತವೆ ಎಂದರೆ ಸಾಕ್ಷಿಯು ಈಗ ತುಕ್ಕು ಹಿಡಿದಿರುತ್ತವೆ ಎಂದು ನುಡಿಯುತ್ತಾರೆ. ಕಬ್ಬಿಣಕ್ಕೆ ನೀರಿನ ಅಂಶ ಬಿದ್ದಾಗ ಮಾತ್ರ ತುಕ್ಕು ಹಿಡಿಯುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮುಮಾಗಳ ಪೈಕಿ ಯಾವ ಯಾವ ಮುದ್ದೆ ಮಾಲುಗಳು ಯಾರು ಯಾರು ಹಿಡಿದುಕೊಂಡಿದ್ದರು ಎಂದು ನಾನು ಹೇಳಬಲ್ಲೆ. ಯಾವ ಯಾವ ಆರೋಪಿತರು ಯಾವ ಯಾವ ಶಬ್ದದಿಂದ ಬೈದರು ಎಂದು ನಾನು ಹೇಳಬಲ್ಲೆ. 4 ನೇ ಆರೋಪಿ ನನ್ನ ಮೈಮೇಲೆ ಬಿದ್ದು ಕೆಟ್ಟ ಶಬ್ದಗಳಿಂದ ಬೈದಿರುತ್ತಾರೆ. ಅವರು ಯಾವ ಶಬ್ದದಿಂದ ಬೈದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. 1, 3 ಮತ್ತು 4 ನೇ ಆರೋಪಿತರು

ನನಗೆ ಹಲ್ಲೆ ಮಾಡಿರುತ್ತಾರೆ. ಈ ವಿಚಾರವನ್ನು ನಾನು ನನ್ನ ನಿಪಿ-1 ರ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಈ ವಿಚಾರವನ್ನು ನಾನು ನನ್ನ ನಿಪಿ-1 ರ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳದೆ ಮೊದಲ ಬಾರಿಗೆ ಈ ದಿನ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸ್ಕೂಟಿಯ ಗಾಳಿಯನ್ನು ತೆಗೆದಿರುವ ವಿಚಾರದ ಬಗ್ಗೆ ನನ್ನ ದೂರಿನಲ್ಲಾಗಲೀ ನ್ಯಾಯಾದೀಶರ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 5 ನೇ ಆರೋಪಿಯ ವಿರುದ್ದ ಮಾಡಿರುವ ಆರೋಪವನ್ನು ನಿಪಿ-1 ರಲ್ಲಾಗಲೀ ಅಥವಾ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನೆಲ್ಲಾ ದೂರಿನಲ್ಲಿ ಹೇಳಬೇಡಿ ಎಂದು ಮಮತಾ, ಪೋಲಿಸ್ ರವರು ನನಗೆ ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 2 ನೇ ಆರೋಪಿಯು 1, 3 ರಿಂದ 6 ನೇ ಆರೋಪಿತರಿಗೆ ನಮ್ಮ ಮೇಲೆ ಹಲ್ಲೆ ಮಾಡಿ ಎಂದು ಪ್ರಚೋದನೆ ಮಾಡಿರುವ ವಿಚಾರವನ್ನು ನಿಪಿ-1 ರಲ್ಲಾಗಲೀ ಅಥವಾ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ 3 ಮತ್ತು 4 ನೇ ಆರೋಪಿತರ ಪೈಕಿ ಒಬ್ಬರು ಮೊಬೈಲ್ ಫೋನನ್ನು ಕಿತ್ತುಕೊಂಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ಮೊಬೈಲ್ ಕಿತ್ತುಕೊಂಡಿರುವ ವಿಚಾರವನ್ನು ನಿಪಿ-1 ರಲ್ಲಾಗಲೀ ಅಥವಾ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಗೆ ದೂರನ್ನು ನೀಡಲು ನಾನು, ಚಾಸಾ-2, 3 ಮತ್ತು ಇನ್ನೊಬ್ಬ ಪರಿಚಯಸ್ಥರನ್ನು ಕರೆದುಕೊಂಡು ಹೋಗಿರುತ್ತೇವೆ. ದೂರನ್ನು ನೀಡಿದ ನಂತರ ಇನ್ನೊಂದು ಬಾರಿ ಪೋಲಿಸ್ ಠಾಣೆಗೆ ಮರು ಹೇಳಿಕೆ ನೀಡಲು ಹೋಗಿರುತ್ತೇನೆ. ದೂರನ್ನು ನೀಡಿದ ಎಷ್ಟು ದಿನಗಳ ನಂತರ ಪೋಲಿಸ್ ಠಾಣೆಗೆ ಮರು ಹೇಳಿಕೆ ನೀಡಲು ಹೋಗಿರುತ್ತೇನೆ ಎಂದು ನೆನಪಿಲ್ಲ. ಪೋಲಿಸ್ ಠಾಣೆಗೆ ಬೆಳಗ್ಗೆ 11.00 ಗಂಟೆಗೆ ಮರು ಹೇಳಿಕೆ ನೀಡಲು ಹೋಗಿರುತ್ತೇನೆ. ಪೋಲಿಸರು ಮರು ಹೇಳಿಕೆಯಲ್ಲಿ ಘಟನೆ ನಡೆದ ಬಗ್ಗೆ ವಿವರವನ್ನು ದಾಖಲಿಸಿರುತ್ತಾರೆ. ಮರು ಹೇಳಿಕೆಯಲ್ಲಿ ಪೋಲಿಸರ ಮುಂದೆ ಆರೋಪಿತರು ಮೊಬೈಲ್ ಕಿತ್ತುಕೊಂಡು ಹೋದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಮರು ಹೇಳಿಕೆಯನ್ನು ನಾನು ಓದಿರುತ್ತೇನೆ, ಅದು ಸರಿ ಇದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ 4 ನೇ ಆರೋಪಿ ಘಟನೆಯನ್ನು ಮೊಬೈಲ್ ನಲ್ಲಿ ಚಿತ್ರೀಕರಿಸಿರುವ ಬಗ್ಗೆ ನಿಪಿ-1 ರಲ್ಲಾಗಲೀ ಅಥವಾ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

3 ಮತ್ತು 4 ನೇ ಆರೋಪಿತರು ಬೆಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 6 ನೇ ಆರೋಪಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. 3, 4 ಮತ್ತು 6 ನೇ ಆರೋಪಿತರು ಊರಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿಯು ಘಟನೆಯ ದಿನ ಊರಲ್ಲೇ ಇದ್ದರು ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಚಕ್ಕುಬಂಧಿ ಪೂರ್ವಕ್ಕೆ :

ಲಚ್ಚಜ್ಜಗೋವಿಂದಪ್ಪ ರವರ ಜಮೀನು, ಪಶ್ಚಿಮಕ್ಕೆ ಃ ರಂಗನಾಥ ರವರ ಜಮೀನು, ಉತ್ತರಕ್ಕೆ ಃ ದಾರಿ ಮತ್ತು ರಾಘವೇಂದ್ರ ರವರ ಜಮೀನು, ದಕ್ಷಿಣಕ್ಕೆ ಃ ಅಶೋಕ ರವರ ಜಮೀನು. ಈ ಮೇಲೆ ಹೇಳಿರುವ ಚಕ್ಕುಬಂದಿ ಸರ್ವೆ ನಂ 173ಃ1 ರ 2 ಎಕರೆ 30 ಗುಂಟೆ ಜಮೀನಿನ ಪೂರ್ಣ ಚಕ್ಕುಬಂಧಿ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮುಮಾಗಳನ್ನು ನ್ಯಾಯಾಲಯದಲ್ಲೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ ಗಳನ್ನು ಮಹಜರ್ ಸಮಯದಲ್ಲಿ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ನಾನು ಹಾಜರಿದ್ದೆ ಹಾಗೂ ಮಹಜರ್ ಗೆ ಸಹಿ ಮಾಡಿರುತ್ತೇನೆ.

ಠಾಣೆಯಲ್ಲಿ ದೂರು ನೀಡಿದ ನಂತರ ನೀವು ಆಸ್ಪತ್ರೆಗೆ ಹೋಗಿರುತ್ತೀರಾ ಅಥವಾ ಆಸ್ಪತ್ರೆಗೆ ದಾಖಲಾದ ನಂತರ ಠಾಣೆಗೆ ಹೋಗಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದ ಬಗ್ಗೆ ನಿಪಿ-1 ರ ದೂರನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪೋಲಿಸ್ ಠಾಣೆಗೆ ದೂರು ನೀಡಲು ಅಂದಾಜು 7.00 ರಿಂದ 7.30 ಗಂಟೆಗೆ ಠಾಣೆಗೆ ಹೋಗಿರುತ್ತೇನೆ. ಪೋಲಿಸರಿಗೆ ಸುಳ್ಳು ದೂರನ್ನು ನೀಡಿ ಆಸ್ಪತ್ರೆಗೆ ಹೋಗಿ ಸುಳ್ಳು ಗಾಯದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ವೈದರ ಬಳಿ ನನ್ನ ಮದ್ಯದ ಕೈಬೆರಳಿಗೆ ಗಾಯವಾಗಿರುವ ಬಗ್ಗೆ ಹಾಗೂ ನನ್ನ ಮೈಕೈಗೆ ನೋವಾಗಿರುವ ಬಗ್ಗೆ ಹಾಗೂ ತಲೆಗೆ ನೋವಾಗಿರುವ ಬಗ್ಗೆ ಮಾಹಿತಿ ನೀಡಿರುತ್ತೇನೆ. ನಾನು ವೈದ್ಯರ ಬಳಿ ಈಗ ಹೇಳಿದಂತೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ.

ಮಹಜರ್ ಮಾಡುವ ಸಮಯದಲ್ಲಿ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಹಿತ ಹಲವಾರು ಜನರು ಹಾಜರಿದ್ದರು. ಮಹಜರ್ ಗೆ ಚಾಸಾ-6 ಮತ್ತು 7 ರವರು ಸಹಿ ಮಾಡಿರುತ್ತಾರೆ. ನಿಪಿ-2 ರ ಮಹಜರ್ ನಲ್ಲಿ ಏನೇನು ಬರೆದಿರುತ್ತದೆ ಎಂದು ಈಗ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ನನಗೆ ನೆನಪಿರುವಷ್ಟು ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ರ ಮಹಜರ್ ನ್ನು ತಯಾರಿಸಲು ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ನಿಪಿ-2 ರ ಮಹಜರನ್ನು ಮಧ್ಯಾಹ್ನ 12.30 ರಿಂದ 1.30 ರವರೆಗೆ ತಯಾರಿಸಿರುತ್ತಾರೆ. ನಿಪಿ-5 ಮತ್ತು 6 ರ ಛಾಯಾಚಿತ್ರದಲ್ಲಿ ನಾನು ಇರುತ್ತೇನೆ. ನಿಪಿ-2 ರ ಮಹಜರ್ ಗೆ ಠಾಣೆಯಲ್ಲೇ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆ ಕಲಂ 164 ರ ಹೇಳಿಕೆಯನ್ನು ದಾಖಲಿಸಲು ನನ್ನನ್ನು ಮಮತಾ, ಪೋಲಿಸ್ ರವರು ಕರೆದುಕೊಂಡು ಬಂದಿರುತ್ತಾರೆ. ಸದರಿ ಮಮತಾ ಪೋಲಿಸರು ನನಗೆ ಪಿರ್ಯಾದಿ ಮತ್ತು ಮರು ಹೇಳಿಕೆಯ ಪ್ರತಿಯನ್ನು ನೀಡಿ ಇದೇ ರೀತಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿ ಎಂದು ತಿಳಿಸಿರುವುದಿಲ್ಲ.

ಮುಮಾ-4, 2 ನೇ ಆರೋಪಿ ಕೈಯಲ್ಲಿತ್ತು. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ದಾಖಲಿಸಿರುವ ಸಿವಿಲ್ ವ್ಯಾಜ್ಯಕ್ಕೆ ಪ್ರತಿಯಾಗಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಆರೋಪಿತರ ವಿರುದ್ದ ನಾವು ಒಂದು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ.

ನಾವು ಆರೋಪಿತರಿಂದ ಜಮೀನನ್ನು ಸ್ವಾದೀನ ಪಡೆಯುವ ಉದ್ದೇಶದಿಂದ ಆರೋಪಿತರು ಊರಲ್ಲಿ ಇಲ್ಲದಿದ್ದರೂ ಹಾಗೂ ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಊರಿನಲ್ಲಿ ಜಮೀನನ್ನು ಬಿಟ್ಟುಕೊಟ್ಟರೆ ದೂರನ್ನು ರಾಜಿ ಮಾಡಿಕೊಳ್ಳುತ್ತೇವೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡುವ ಸಲುವಾಗಿ ನ್ಯಾಯಾಧೀಶರ ಮುಂದೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೂರನ್ನು ನೀಡಿರುವ ಕಾರಣದಿಂದ ಹಾಗೂ ಯಾವುದೇ ಘಟನೆ ನಡೆಯದಿದ್ದಕಾರಣ ನನ್ನ ದೂರು, ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆ, ಸಾಕ್ಷಿ ವಿಚಾರಣೆಯಲ್ಲಿ ವೈರುದ್ಯವಿರುತ್ತದೆ ಎಂದರೆ ಸರಿಯಲ್ಲ. ಮುಮಾಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಕಲ್ಲಿನಿಂದ 3 ಮತ್ತು 4 ನೇ ಆರೋಪಿತರು ಚಾಸಾ-2 ಮತ್ತು 3 ರವರಿಗೆ ಹಲ್ಲೆ ಮಾಡಿರುತ್ತಾರೆ. ಆರೋಪಿತರು ಕಲ್ಲಿನಿಂದ ಹಲ್ಲೆ ಮಾಡಿರುವುದಿಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಮುಮಾ-5 ರ ಕಲ್ಲಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತರನ್ನು ಬೆದರಿಸಿ ಜಮೀನನ್ನು ಬಿಡಿಸಿಕೊಳ್ಳುವ ಸಲುವಾಗಿ ಪೋಲಿಸರೊಂದಿಗೆ ಶರೀಖಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.